ಆ) ರಾಜ್ಯದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪಿ.ಜಿ. ಸೀಟುಗಳು ದೊರಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ಸೀಟುಗಳನ್ನು ಹೆಚ್ಚುಗೊಳಿಸಿ ಅರ್ಹರಿಗೆ ನೀಡಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳಾವುವು ?

ಡಾ. ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಆ)

	ಸ್ನಾತಕೋತ್ತರ	
	ಡಿಗ್ರಿ	ಡಿಪ್ಲೊಮೋ
ಸರ್ಕಾರಿ ವೈದ್ಯಕೀಯ ಕಾಲೇಜುಗಳು	257	280
ಖಾಸಗಿ ವೈದ್ಯಕೀಯ ಕಾಲೇಜುಗಳು	486	372
ಒಟ್ಟು ಸೀಟುಗಳು	743	652

ಆ) ಇಲ್ಲ – ಪ್ರತಿ ವರ್ಷ ಮುಕ್ತ ಸ್ಪರ್ಧೆಯ ಪಾಲಿನಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಉತ್ತೀರ್ಣರಾದವರಿಗೆ ಅರ್ಹತೆ ಮತ್ತು ಮೀಸಲಾತಿ ಆಧಾರದ ಮೇಲೆ ಪಿ.ಜಿ. ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಇ) ಭಾರತ ವೈದ್ಯಕೀಯ ಪರಿಷತ್ತು ಮತ್ತು ಸಂಬಂಧಿಸಿದ ವಿಶ್ವವಿದ್ಯಾನಿಲಯಗಳು ನಿಗದಿಪಡಿಸಿರುವ ಷರತ್ತುಗಳನ್ನು ವೈದ್ಯಕೀಯ ಕಾಲೇಜುಗಳು ಪಾಲಿಸಿದ ನಂತರ ಸ್ನಾತಕೋತ್ತರ ಸೀಟುಗಳನ್ನು ಹೆಚ್ಚಿಸಲು ಪರಿಶೀಲಿಸಲಾಗುವುದು. ತದನಂತರ ಅರ್ಹತೆ ಮತ್ತು ಮೀಸಲಾತಿ ಆಧಾರದ ಮೇಲೆ ಸ್ನಾತಕೋತ್ತರ ಸೀಟನ್ನು ನೀಡಲಾಗುವುದು.

ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಕ್ಕೆ ಬರಬೇಕಾದ ಶುಲ್ಕ

993 (224): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಜಿರಾದ್):–

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ ಬರಬೇಕಾದ ಶುಲ್ಕದ ಮೊತ್ತವೆಷ್ಟು;

ಆ) ಯಾವ ಯಾವ ಖಾಸಗಿ ವೈದ್ಯಕೀಯ ಕಾಲೇಜುಗಳು ಇದುವರೆವಿಗೂ ಈ ಶುಲ್ಕವನ್ನು ಪಾವತಿ ಮಾಡಿರುವುದಿಲ್ಲ (ಈ ಕಾಲೇಜುಗಳಿಂದ ಸರ್ಕಾರಕ್ಕೆ ಬರಬೇಕಾದ ಮೊತ್ತದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);

ಇ) ಶುಲ್ಕವನ್ನು ಪಾವತಿ ಮಾಡದೆ ಇರುವ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ನಿಲ್ಲಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ದಿನಾಂಕ: 10-4-92ರಂದು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಕ್ಲಿನಿಕಲ್ ಶುಲ್ಕದ ಒಟ್ಟು ಮೊತ್ತ ರೂ. 30.59 ಲಕ್ಷಗಳು.

ಆ) ವಿವರವನ್ನು ಅನುಬಂಧ – 'ಎ'ನಲ್ಲಿ ಲಗತ್ತಿಸಿದೆ.

೫) ಬಾಕಿ ಇದ್ದ ಕ್ಲಿನಿಕಲ್ ಶುಲ್ಕವನ್ನು ಪಾವತಿ ಮಾಡುವಂತೆ ಖಾಸಗಿ ವೈದ್ಯಕೀಯ ಕಾಲೇಜು ಆಡಳಿತ ವರ್ಗಕ್ಕೆ ಈ ಹಿಂದೆ ಒತ್ತಾಯಪಡಿಸಿದಾಗ ಸದರಿಯವರುಗಳಿಂದ ಪಾವತಿಯಾಗದೇ ಇದ್ದ ಕಾರಣ ಸರ್ಕಾರಿ ಆದೇಶ ಸಂಖ್ಯೆ: ಅಕುಕ 343 ಎಂಎಸ್ ಎಫ್ ಸಿ 90, ದಿನಾಂಕ: 6-3-92ನ್ನು ಹೊರಡಿಸಿ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡುತ್ತಿದ್ದ ಕ್ಲಿನಿಕಲ್ ಸೌಲಭ್ಯವನ್ನು ನಿಲ್ಲಿಸಲಾಯಿತು. ತರುವಾಯ ಸದರಿ ಆಡಳಿತ ವರ್ಗದವರುಗಳು ಬಾಕಿಯಲ್ಲಿನ ಭಾಗಶಃ ಮೊತ್ತವನ್ನು ಸರ್ಕಾರಕ್ಕೆ ಪಾವತಿ ಮಾಡಿ, ಕ್ಲಿನಿಕಲ್ ಸೌಲಭ್ಯವನ್ನು ಮತ್ತೆ ಮುಂದುವರೆಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ ಕಾರಣ ಸರ್ಕಾರವು ಕೆಲವು ಷರತ್ತುಗಳಿಗೆ ಒಳಪಡಿಸಿ ಸಾರ್ವಜನಿಕ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಆದೇಶ ಸಂಖ್ಯೆ: ಅಕುಕ 343 ಎಂಎಸ್ಎಫ್ಸಿ 90, ದಿನಾಂಕ: 24-3-92ರಲ್ಲಿ ಪುನಃ ಕ್ಲಿನಿಕಲ್ ಸೌಲಭ್ಯ ಮುಂದುವರೆಸಲಾಯಿತು. ಆದುದರಿಂದ, ಬಾಕಿ ಕಟ್ಟದಿದ್ದ ಪಕ್ಷದಲ್ಲಿ ಸರ್ಕಾರವು ಕ್ಲಿನಿಕಲ್ ಸೌಲಭ್ಯವನ್ನು ಹಿಂತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ARREARS OF CLINICAL FEES OF PRIVATE MEDICAL COLLEGES

(Rupees in lakhs)

Sl. No.	Name of the College	Amount remitted to Govt. A/C/ Joint A/C in Bank	Balance
1.	JN Medical College, Belgaum	21.75	-0.40*
2.	JJM Medical College, Davanagere	20.00	-0.85*
3.	M.R. Medical College, Gulbarga	15.00	-2.25*
4.	K.M.C., Mangalore	32.43	+7.98
5.	M.S. Ramaiah Medical College, Bangalore	Nil	Nil
6.	Kempegowda Institute of Medical Sciences, Bangalore	13.07	+5.02
7.	Dr. Ambedkar Medical College, Bangalore	15.00	+2.71
8.	Al-Ameen Medical College, Bijapur	23.51	-5.44*
9.	JSS Medical College, Mysore	Nil	+14.88
10.	A.I.I.M.S., Bellur	21.08	-4.53*

11. Sri. Devaraj Urs Medical College, Kolar	19.88	-7.72*
12. Sri. Siddhartha Medical College, Tumkur	15.12	Nil
Total:	196.84	+51.78
		-21.19
		+30.59

*-: Excess payment
+: Balance amount

ಜಯನಗರ ಕೇಂದ್ರ ಗ್ರಂಥಾಲಯದಲ್ಲಿ ಪುಸ್ತಕ ಖರೀದಿಯಲ್ಲಿ ನಡೆದಿರುವ ಅವ್ಯವಹಾರ

994 (223): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಜಿರಾದ್):-

ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಜಯನಗರದಲ್ಲಿರುವ ಕೇಂದ್ರ ಗ್ರಂಥಾಲಯದ ವ್ಯಾಪ್ತಿಗೆ ಎಷ್ಟು ನಗರ ಕೇಂದ್ರ ಗ್ರಂಥಾಲಯಗಳು ಬರುತ್ತವೆ;

ಆ) ಈ ಗ್ರಂಥಾಲಯಕ್ಕೆ ಕಳೆದ ವರ್ಷ ಪುಸ್ತಕಗಳನ್ನು ಕೊಳ್ಳಲು ಬಿಡುಗಡೆಯಾದ ಹಣವೆಷ್ಟು ಹಾಗೂ ಈ ಗ್ರಂಥಾಲಯಕ್ಕೆ ಬೆಂಗಳೂರು ಮಹಾನಗರಪಾಲಿಕೆಯಿಂದ ವಿವಿಧ ರೂಪದಲ್ಲಿ ಪ್ರತಿವರ್ಷ ಬರುತ್ತಿರುವ ಹಣವೆಷ್ಟು;

ಇ) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಹೊರಡಿಸಿರುವ ಸುತ್ತೋಲೆಯ ಆದೇಶವನ್ನು (ಸುತ್ತೋಲೆ ದಿ: 1-8-90) ನಿರ್ಲಕ್ಷಿಸಿ ಜಯನಗರ ಕೇಂದ್ರ ಗ್ರಂಥಾಲಯದ ಅಧಿಕಾರಿಗಳು ಲಕ್ಷಾಂತರ ರೂ.ಗಳ ಪುಸ್ತಕಗಳನ್ನು ಖರೀದಿಸಿರುವುದು ನಿಜವೇ;

ಈ) ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಮೊತ್ತದ ಪುಸ್ತಕಗಳನ್ನು ಖರೀದಿ ಮಾಡಲಾಗಿದೆ;

ಉ) ಒಂದೇ ಸಂಸ್ಥೆಯಿಂದ ಒಂದು ಲಕ್ಷ ರೂ.ಗಳ ಪುಸ್ತಕಗಳನ್ನು ಖರೀದಿ ಮಾಡಿರುವುದು ನಿಜವೇ;

ಊ) ಮೇಲ್ಕಂಡ ಪುಸ್ತಕ ಖರೀದಿಯಲ್ಲಿ ಲಕ್ಷಾಂತರ ರೂ.ಗಳ ಅವ್ಯವಹಾರವಾಗಿರುವ ಸಂಭವವಿರುವುದರಿಂದ ಈ ಪ್ರಕರಣವನ್ನು ಸಿ.ಐ.ಡಿ. ಮೂಲಕ ವಿಚಾರಣೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಸಚಿವರು):-

ಅ) ಬೆಂಗಳೂರು ನಗರ ಕೇಂದ್ರ ಗ್ರಂಥಾಲಯ ವ್ಯಾಪ್ತಿಯಲ್ಲಿ 60 ಗ್ರಂಥಾಲಯಗಳಿವೆ. ಅವುಗಳ ವಿವರ ಹೀಗಿದೆ: